ಆತಂಕದಿಂದ ಏನನ್ನೋ ಹುಡುಕುತ್ತಿದ್ದಳು. ಅವನನ್ನು ನೋಡಿದೊಡನೆಯೇ ಮಧ್ಯಾಹ್ನ ಕರೆದಿದ್ದಂತೆ ನೋವಿನ ದನಿಯಲ್ಲಿ 'ಮಗೂ' ಅಂದಳು, ಅವನ ಕೈಬೆರಳನ್ನೇ ದುರುಗುಟ್ಟಿ ನೋಡಿದಳು. ಅವಳಿಗೆ ಏನನ್ನೋ ಕೇಳುವುದಿತ್ತು. ಸೂರಿ ಒರಟಾಗಿ 'ನನಗೆ ನನ್ನದೇ ಚಿಂತೆ. ನನ್ನನ್ನು ಸುಮ್ಮನೆ ಪೀಡಿಸಬೇಡಮ್ಮ' ಎಂದು ಕಟುವಾಗಿ ಹೇಳಿದ. ಬೆಳಗ್ಗೆ ಜೋಡಿಹಕ್ಕಿ ಕಂಡಮೇಲೆ ಮದುವೆಯ ಮಾತು ಬಂದಿತ್ತು. ಪಾಪ, ಮಗೂ ಅದನ್ನೇ ಮನಸ್ಸಿಗೆ ಹಚ್ಚಿಕೊಂಡಿದೆ ಎಂದು ಕೇಳಬೇಕಾದ್ದನ್ನ ಕೇಳದೆ, 'ರಾತ್ರಿಗೆ ಅಡಿಗೆ ಏನು ಮಾಡಲಿ ಅಂದೆ' ಎಂದಳು. 'ಶಾವಿಗೆ ಇದ್ದರೆ ಶಾವಿಗೆ ಪಾಯಸ ಮಾಡು. ಇವತ್ತು ಪಾಯಸ ತಿನ್ನಬೇಕು ಅನ್ನಿಸಿದೆ' ಅಂದ. ಜೋಡಿಗಿಣಿ ದರ್ಶನದಿಂದ ಮಗನಿಗೆ ಹುರುಪು ಬಂದಿದೆ. ಇನ್ನು ಬಿ.ಎ. ಮಾಡಲಿ ಬಿಡಲಿ, ಮದುವೆ ಖಂಡಿತ ಅಂದುಕೊಂಡು, ಯೋಗ್ಯ ಹುಡುಗಿ ಯಾರು ಎಂದು ಗೊತ್ತಿದ್ದ ಮನೆತನಗಳನ್ನೆಲ್ಲ ಮನಸ್ಸಿನಲ್ಲಿಯೇ ಸೋದಾಡುತ್ತ ಅಡಿಗೆ ಮನೆಗೆ ನಡೆದಳು. ರಾತ್ರಿ ಭರ್ಜರಿ ಪಾಯಸ, ನಿಂಬೆಹಣ್ಣಿನ ಚಿತ್ರಾನ್ನದ ಊಟವಾಯಿತು.

ಮರುದಿನ ಸೂರಿಗೆ ಮಾಡುವುದು ಬಹಳವಿತ್ತು. ಸುಬ್ರಹ್ಮಣ್ಣ ಅವನ ಸ್ನೇಹಿತ, ವಯಸ್ಸಿನಲ್ಲಿ ದೊಡ್ಡವನು. ಸೂರಿ ಯಾರಿಗಾದರೂ ತನ್ನನ್ನು ಟೀಕಿಸುವ, ಬುದ್ಧಿಹೇಳುವ ಅಧಿಕಾರ ಕೊಟ್ಟಿದ್ದರೆ, ಅವನಿಗೊಬ್ಬನಿಗೆಯೇ. ಸುಬ್ರಮಣ್ಣ ಉರೂಫ್ ಸುಬ್ಬುವಿಗೆ ಮುನಿಸಿಪಾಲಿಟಿ ನೌಕರಿ, ಸುಂಕದ ಗುಮಾಸ್ತನ ಕೆಲಸ. ದಿನವೂ ಊರೊಳಗೆ ಬರುತ್ತಿದ್ದ ಸೌದೆ, ತರಕಾರಿ, ದಿನಸಿ ಗಾಡಿಗಳಿಂದ, ಅಪರೂಪದ ಒಂದೊಂದು ಲಾರಿ, ಮೋಟರ್ ಕಾರುಗಳಿಂದ ಸುಂಕ ವಸೂಲಿ ಮಾಡಿ, ಅವುಗಳ ಚಕ್ರಕ್ಕೊ, ಮಡ್‌ಗಾರ್ಡಿಗೊ ಗೊಬ್ಬಳಿಯಗೋಂದು ಬಳಿದ ಕೆಂಪುಚೀಟಿ ಅಂಟಿಸುವುದು. ತಿಂಗಳಿಗೆ ಹನ್ನೆರಡು ರೂಪಾಯಿ ಸಂಬಳ.

ಸುಬ್ಬು ಗಾಂಧೀ ಭಕ್ತ. ಓದಿದ್ದು ಕೇವಲ ಎಲ್.ಎಸ್. ಆದರೂ ಅವರಿವರಿಂದ ಹಳೆಯ ದಿನಪತ್ರಿಕೆ ಬೇಡಿ ತಂದು, ಗಾಂಧಿಯ ಹರತಾಳ, ನೆಹರೂ ಭಾಷಣ, ಕಾಂಗ್ರೆಸ್ ಅಧಿವೇಶನ, ಜಿನ್ನಾ ಪಿತೂರಿ ಮುಂತಾದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ದೇಶದ ರಾಜಕಾರಣದ ಸುದ್ದಿಯೆಲ್ಲವನ್ನೂ ಚಾಚೂತಪ್ಪದೆ ಓದಿಕೊಳ್ಳುತ್ತಿದ್ದ. ಯಾರು ಸಿಕ್ಕಿದರೂ 'ಈ ಹಾಳು ಪರಂಗಿ ಸೂಳೇಮಕ್ಕಳನ್ನ ಹೊಡೆದೋಡಿಸಿ ದೇಶಕ್ಕೆ ಸ್ವಾತಂತ್ರ್ಯ ಬರೋ ಹಾಗೆ ಮಾಡೋವರೆಗೂ...' ಎಂದೆಲ್ಲ ಕೊರೆಯುತ್ತಿದ್ದ. ಆ ಮಾತೆಲ್ಲ ಊರಿನವರಿಗೆ ಬೇಕೂ ಆಗಿರಲಿಲ್ಲ, ಅರ್ಥವೂ ಆಗುತ್ತಿರಲಿಲ್ಲ. ದಿನವೂ ಡ್ಯೂಟಿ ಮುಗಿದ ತಕ್ಷಣ ಕಚೇರಿಗೆ ಹೋಗಿ ಸುಂಕದ ವಸೂಲಿ ಹಣ ಕಟ್ಟಿ ಬರುವಾಗ ಕಿಸೆಯಲ್ಲಿದ್ದ ಗಾಂಧಿಟೋಪಿಯನ್ನು ತಲೆಗೇರಿಸಿ 'ಝಂಡಾ ಊಂಛಾ...' ಎಂದು ತನಗೆ ತಾನೇ ಹಾಡಿಕೊಳ್ಳುತ್ತ ಮನೆ ಸೇರುತ್ತಿದ್ದ. ಕೆಲಸಬಿಟ್ಟು, ವಾರ್ಧಾಕ್ಕೆ ಹೋಗಿ, ಗಾಂಧೀಜಿ ಆಶ್ರಮದಲ್ಲಿ ತರಬೇತಿ ಪಡೆದು, ಸತ್ಯಾಗ್ರಹಗಳಲ್ಲಿ ಭಾಗಿಯಾಗಿ ಜೈಲು ಸೇರಬೇಕೆಂಬುದು ಅವನ ಕಟ್ಟಾಸೆ.

ಸುಬ್ಬುವಿಗೊಂದು ಹವ್ಯಾಸವಿತ್ತು. ಆಗ ಸಿಗುತ್ತಿದ್ದ ಕಪ್ಪು, ಕೆಂಪು, ನೀಲಿ ಬಣ್ಣದ ಪೆನ್ಸಿಲ್‌ಗಳಿಂದಲೇ ಮುದ್ದಾಗಿ ಪುಟ್ಟ ಪುಟ್ಟ ಗಣೇಶ, ಗಜಲಕ್ಷ್ಮಿ, ಸರಸ್ವತಿಯರ ಚಿತ್ರಬಿಡಿಸುವುದು. ಸಂತೆಯ ದಿನ ಬಿಟ್ಟರೆ ದಿನನಿತ್ಯದಲ್ಲಿ ಊರಿಗೆ ಬರುತ್ತಿದ್ದ ಗಾಡಿಗಳು ಕಡಿಮೆ, ಹೀಗಾಗಿ ಬಿಡುವಿಗೇನೂ ಕೊರತೆ ಇರಲಿಲ್ಲ. ಸುಂಕದ ಕಟ್ಟೆಯಲ್ಲಿ ಕೂತು ಕೂತೇ ಚಿತ್ರ ಬಿಡಿಸುತ್ತಿದ್ದ, ಕೋಟೆಯ ಹೊರಗೆ ಊರಿನ ಮಿಡಲ್‌ಸ್ಕೂಲು. ಹೋಗಿ ಬರುವ ಹುಡುಗರಿಗೆ ಅರ್ಧಾಣೆ, ಒಂದಾಣೆಗೆ ಚಿತ್ರಗಳನ್ನು ಮಾರಿ, ತಿಂಗಳಿಗೆ ಒಂದೆರಡು ರೂಪಾಯಿ ಮೇಲು ಸಂಪಾದನೆ ಗಿಟ್ಟಿಸುತ್ತಿದ್ದ. ಅವನ ಕಲೆ ತುಂಬ ಜನಪ್ರಿಯವಾಗಿತ್ತು. ಊರಿನ ಅನೇಕರ ಮನೆಗಳಲ್ಲಿ ಸುಬ್ಬುವಿನ ಚಿತ್ರಗಳು ಪೂಜೆಗೊಳ್ಳುತ್ತಿದ್ದವು.

(ಸಶೇಷ)